# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 928 |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಜಾನುವಾರುಗಳು ಅಪಘಾತಗೊಂಡಾಗ ಮತ್ತು ಅನಾರೋಗ್ಯ ಸಂದರ್ಭದಲ್ಲಿ ಅಗತ್ಯ ತುರ್ತು ಚಿಕಿತ್ಸೆ ನೀಡಲು ಸಮೀಪದ ಪಶುವೈದ್ಯಾಲಯಕ್ಕೆ ಸಾಗಿಸಲು ಆರೋಗ್ಯ ಇಲಾಖೆಯಲ್ಲಿ ಇರುವ 108 ಅಂಬುಲೆನ್ಸ್ ವ್ಯವಸ್ಥೆಯಂತೆ ಪಶುಸಂಗೋಪನಾ ಇಲಾಖೆಯಲ್ಲಿ ಜಾನುವಾರುಗಳನ್ನು ಪಶುವೈದ್ಯಾಲಯಕ್ಕೆ ತುರ್ತಾಗಿ ಸೇರಿಸಿ ಔಷಧೋಪಚಾರ ಮತ್ತು ಆರೈಕೆ ಮಾಡುವ ನಿಟ್ಟಿನಲ್ಲಿ ಅಂಬುಲೆನ್ಸ್ ಸೇವೆಯಿದೆಯೇ; ಇದ್ದಲ್ಲಿ, ಮಾಹಿತಿ ನೀಡುವುದು; | ಜಾನುವಾರುಗಳು ಅಪಘಾತಗೊಂಡಾಗ ಮತ್ತು ಅನಾರೋಗ್ಯ ಸಂದರ್ಭದಲ್ಲಿ ಅಗತ್ಯ ತುರ್ತು ಚಿಕಿತ್ಸೆ ನೀಡಲು ಪಶು ವೈದ್ಯಾಲಯಕ್ಕೆ ಸಾಗಿಸುವ ಬದಲು ರೈತರ /ಜಾನುವಾರು ಮಾಲೀಕರ ಮನೆ ಬಾಗಿಲಿಗೆ ಹೋಗಿ ಅಗತ್ಯ ತುರ್ತು ಚಿಕಿತ್ಸೆ ನೀಡುವ ಆಂಬ್ಯುಲೆನ್ಸ್ ಸೇವೆ ಇಲಾಖೆಯಲ್ಲಿ ಆಗಸ್ಟ್-23 ರಿಂದ ಇಲಾಖೆಯಲ್ಲಿ ಚಾಲ್ತಿಯಲ್ಲಿರುತ್ತದೆ.<br><br>ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ Establishment & Strengthening of Veterinary Hospitals and Dispensaries (ESVHD) ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಮತ್ತು ಪಾಲಿಕ್ಲಿನಿಕ್‌ಗಳಿಗೆ ಒಟ್ಟು 275 ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕಗಳನ್ನುವಿತರಿಸಲಾಗಿರುತ್ತದೆ.<br><br>ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಸೇವಾ ಪೂರೈಕೆದಾರರಾದ M/s Eduspark International Private Limited Maharastra ರವರ ಮುಖಾಂತರ ನಿರ್ವಹಿಸಲಾಗುತ್ತಿದೆ.<br><br>ಸಂಚಾರಿ ಪಶುಚಿಕಿತ್ಸಾ ವಾಹನಗಳ ಮೂಲಕ ರೈತರ ಮನೆ ಬಾಗಿಲಿಗೆ ಅಗತ್ಯ ತುರ್ತು ಪಶು ವೈದ್ಯಕೀಯ ಸೇವೆಗಳನ್ನು ಪ್ರತಿ ವಾಹನಕ್ಕೆ ಒಬ್ಬ ಪಶುವೈದ್ಯರು, ಒಬ್ಬ ಅರೆ ತಾಂತ್ರಿಕ ಸಿಬ್ಬಂದಿ ಮತ್ತು ವಾಹನ ಚಾಲಕ ಕಮ್ ಗ್ರೂಪ್ 'ಡಿ' ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವಾ ಪೂರೈಕೆದಾರರ ಮೂಲಕ ನೇಮಿಸಿಕೊಂಡು ಕಾರ್ಯಕ್ರಮವನ್ನು "1962" ಸಹಾಯ ವಾಣಿಯನ್ನು ನಿರ್ವಹಿಸುವುದರ ಮುಖಾಂತರ ದಿನದ 24 ಗಂಟೆಗಳೂ ಕಾರ್ಯ ನಿರ್ವಹಿಸಲಾಗುತ್ತಿದೆ. |

| | | |
|---|---|---|
| | | ಸಹಾಯವಾಣಿ ಕರೆ ಕೇಂದ್ರದಲ್ಲಿ ಕರೆ ನಿರ್ವಾಹಕರು, ರೈತರು/ಜಾನುವಾರು ಮಾಲೀಕರಿಂದ ಸ್ವೀಕರಿಸಿದ ಫೋನ್ ಕರೆಗಳನ್ನು GPS ಮುಖಾಂತರ track ಮಾಡಿ ಸಹಾಯವಾಣಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವ ಪಶುವೈದ್ಯರು ತುರ್ತುಚಿಕಿತ್ಸೆ ಅಗತ್ಯತೆ ಬಗ್ಗೆ ನಿರ್ಧರಿಸಿ ಸಂಬಂಧಪಟ್ಟ ಜಿಲ್ಲೆ, ತಾಲ್ಲೂಕುಗಳಲ್ಲಿರುವ ಸಂಚಾರಿ ವಾಹನಗಳಲ್ಲಿ ಕಾರ್ಯ ನಿರ್ವಹಿಸುವ ಪಶು ವೈದ್ಯರುಗಳಿಗೆ ವರ್ಗಾಯಿಸಲಾಗುತ್ತದೆ.<br><br>MVU call centre ನಲ್ಲಿ ಸ್ವೀಕರಿಸುವ ಪ್ರತಿ ಕರೆಗಳಿಗೆ docket Number ನೀಡಬೇಕಾಗಿದ್ದು, ಚಿಕಿತ್ಸೆ ನೀಡಿದ ಮಾಹಿತಿಯನ್ನು NDDB ರವರು ಅಭಿವೃದ್ಧಿಪಡಿಸಿರುವ ಇನಾಫ್ ತಂತ್ರಾಂಶದಲ್ಲಿರುವ Treatment Module ನಲ್ಲಿ ದಾಖಲಿಸಿದ ನಂತರ ಸದರಿ docket Number ನ್ನು ಮುಕ್ತಾಯಗೊಳಿಸಬಹುದಾಗಿರುತ್ತದೆ.<br><br>ಉದ್ದೇಶಿತ ಸಮಯದೊಳಗೆ ರೈತರ ಜಾನುವಾರುಗಳಿಗೆ ಅಗತ್ಯ ತುರ್ತು ಸೇವೆಯನ್ನು ಒದಗಿಸಲು ಸಂಚಾರಿ ಪಶುಚಿಕಿತ್ಸಾ ವಾಹನಗಳು ಸಹಾಯಕಾರಿಯಾಗಿದ್ದು, ಈ ಸೇವೆಯಿಂದ ಜಾನುವಾರುಗಳಿಗೆ ಸಕಾಲದಲ್ಲಿ ಮನೆಬಾಗಿಲಿಗೆ ಪಶುವೈದ್ಯಕೀಯ ಸೇವೆ ದೊರೆಯುತ್ತದೆ ಮತ್ತು ರೈತರ ಆರ್ಥಿಕ ಮಟ್ಟ ಸುಧಾರಿಸಬಹುದಾಗಿದೆ. |
| ಆ | ಜಾನುವಾರುಗಳನ್ನು ಸಾಂಕ್ರಾಮಿಕ ರೋಗಗಳಿಂದ ಮುಕ್ತಗೊಳಿಸಿ ಪಶುಗಳ ಆರೋಗ್ಯವನ್ನು ಸದೃಢ ರೀತಿಯಲ್ಲಿ ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಜಾನುವಾರುಗಳನ್ನು ಸಾಂಕ್ರಾಮಿಕ ರೋಗಗಳಿಂದ ಮುಕ್ತಗೊಳಿಸಿ ಪಶುಗಳ ಆರೋಗ್ಯವನ್ನು ಸದೃಢ ರೀತಿಯಲ್ಲಿ ಕಾಪಾಡಲು:<br><br>• ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರತಿ ವರ್ಷ ವೇಳಾಪಟ್ಟಿಯಂತೆ ಕಾಲಕಾಲಕ್ಕೆ ವಿವಿಧ ಜಾನುವಾರು ರೋಗಗಳ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ (2023ನೇ ಏಪ್ರಿಲ್ ಮಾಹೆಯಿಂದ ನವೆಂಬರ್-2023ರ ಮಾಹೆಯವರೆಗೆ ಲಸಿಕಾ ಪ್ರಗತಿಯ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ).<br><br>• ಕಳೆದ ಐದು ವರ್ಷಗಳಲ್ಲಿ ಉಂಟಾದ ರೋಗೋದ್ರೇಕಗಳ ವರದಿಯನ್ನಾಧರಿಸಿ ನಿರ್ದಿಷ್ಟ ಪ್ರದೇಶಗಳಲ್ಲಿ ರೋಗ ನಿಯಂತ್ರಿಸಲು ಜಿಲ್ಲಾ ಕೇಂದ್ರಗಳಿಗೆ ಮುನ್ಸೂಚನಾ ವಿವರಗಳನ್ನು ಕಳುಹಿಸಲಾಗುತ್ತಿದೆ.<br><br>• ರೋಗ ನಿಯಂತ್ರಣಕ್ಕಾಗಿ ಜಾನುವಾರುಗಳಿಗೆ ಅಗತ್ಯ ಪ್ರಮಾಣದಲ್ಲಿ ಜಂತು ನಾಶಕ ಔಷಧಿಗಳನ್ನು ನೀಡಲಾಗುತ್ತಿದೆ. |

| | | |
|---|---|---|
| | | • ವಿಲಕ್ಷಣ ಮತ್ತು ವಿದೇಶಿ ರೋಗಗಳ **ರೋಗೋದ್ರೇಕ** ಉಂಟಾದ ಸಂದರ್ಭಗಳಲ್ಲಿ ಕೇಂದ್ರ **ಸರ್ಕಾರದ** ಮಾರ್ಗಸೂಚಿಗಳನ್ವಯ **ರೋಗ** ನಿಯಂತ್ರಿಸಲಾಗುತ್ತಿದೆ.<br><br>• ಸಾಂಕ್ರಾಮಿಕ ರೋಗೋದ್ರೇಕಗಳು **ಉಂಟಾದ** ಸಂದರ್ಭಗಳಲ್ಲಿ ಸಂಬಂಧಪಟ್ಟ **ಜಿಲ್ಲಾಧಿಕಾರಿಗಳ** ಮೂಲಕ ಜಾನುವಾರು ಸಂತೆ/ **ಜಾತ್ರೆ** ಮುಂತಾದವುಗಳನ್ನು **ತಾತ್ಕಾಲಿಕವಾಗಿ** ನಿಯಂತ್ರಿಸುವ/ ನಿಷೇಧಿಸಲು **ಆಜ್ಞೆ** ಹೊರಡಿಸಲಾಗುತ್ತದೆ.<br><br>• ರಾಜ್ಯಾದ್ಯಂತ 1 ಸೂಪರ್ ಸ್ಪೆಷಾಲಿಟಿ **ಆಸ್ಪತ್ರೆ**, 4 ಸ್ಪೆಷಾಲಿಟಿ ಆಸ್ಪತ್ರೆಗಳು ಹಾಗೂ 26 **ಪಾಲಿಕ್ಲಿನಿಕ್**ಗಳು ಕಾರ್ಯನಿವಹಿಸುತ್ತಿದ್ದು ಗುಣಮಟ್ಟದ **ಚಿಕಿತ್ಸೆ** ನೀಡುವಲ್ಲಿ ಸಹಕಾರಿಯಾಗಿವೆ.<br><br>• ಜಾನುವಾರುಗಳಿಗೆ ಉತ್ತಮ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ಒಟ್ಟು 2434 ಪಶು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.<br><br>• ರಾಜ್ಯದಲ್ಲಿರುವ 13 ರೋಗನಿರ್ಣಯ ಪ್ರಯೋಗಾಲಯಗಳಲ್ಲಿ ಜಾನುವಾರುಗಳಲ್ಲಿ ಕಂಡುಬರುವ ರೋಗಗಳನ್ನು ದೃಢೀಕರಿಸಲಾಗುತ್ತಿದೆ. |

**ಇ-ಪಸಂಮೀ 230 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

# ಅನುಬಂಧ-1

## ಕ.ವಿ.ಪ ಪ್ರಶ್ನೆ ಸಂಖ್ಯೆ: 775(928)

| ಕ್ರ.ಸಂ | ರೋಗದ ಹೆಸರು | 2023-24 ನೇ ಸಾಲಿನ (ಏಪ್ರಿಲ್-23 ರಿಂದ ನವೆಂಬರ್-23 ರ ವರೆಗೆ) ವಿವಿದ ರೋಗಗಳ ವಿರುದ್ಧ ಲಸಿಕೆ ಹಾಕಲಾದ ಜಾನುವಾರುಗಳಳ ಸಂಖ್ಯೆ (ಲಕ್ಷ ಗಳಲ್ಲಿ) |
|---|---|---|
| 1. | ಕಾಲು ಮತ್ತು ಬಾಯಿ ರೋಗ | 97.21 |
| 2. | ಕಂದು ರೋಗ | 4.39 |
| 3. | ಪಿ.ಪಿ.ಆರ್ | 75.33 |
| 4. | ನೆರಡಿ ರೋಗ | 2.47 |
| 5. | ಚಪ್ಪು ರೋಗ | 2.92 |
| 6. | ಗಳಲೆ ರೋಗ | 67.07 |
| 7. | ಕರುಳು ಬೇನೆ | 169.42 |
| 8. | ಕುರಿ/ ಮೇಕೆ ಸಿಡುಬು | 1.61 |
| 9. | ನೀಲಿ ನಾಲಿಗೆ ರೋಗ | 0.24 |
| 10. | ಚರ್ಮಗಂಟು ರೋಗ | 75.40 |
| 11. | ಹುಚ್ಚು ನಾಯಿ ರೋಗ | 4.64 |